# ಜಾತಿಪದ್ಧತಿ ಬಗ್ಗೆ ರಾಮಕೃಷ್ಣ-ವಿವೇಕಾನಂದರ ನಿಲುವು

"ಪ್ರೀತಿಗೆ ಜಾತಿ-ಮತಗಳು ಬಾಧಕವಲ್ಲ. ಧನಿಗೆ ನನ್ನಲ್ಲಿ ತಾಯಿಯ ವಾತ್ಸಲ್ಯವಿದೆ. ನನಗೆ ಅವಳೇ ತಾಯಿಯಂತೆ ದೇವತೆ, ಬ್ರಾಹ್ಮಣರಿಗಿಂತ ಉತ್ತಮಳು. ನಾನು ಅವಳಿಂದಲೇ ಭಿಕ್ಷೆ ಪಡೆಯುತ್ತೇನೆ." ಈ ರೀತಿ ಹೇಳಿದವರು ರಾಮಕೃಷ್ಣ ಪರಮಹಂಸರು. ಸಂದರ್ಭ ತಮ್ಮ ೯ನೆಯ ವಯಸ್ಸಿನಲ್ಲಿ ಉಪ ನಯನವಾದಾಗ ಪ್ರಥಮ ಭಿಕ್ಷೆಯನ್ನು ಒಬ್ಬ ಬ್ರಾಹ್ಮಣನಿಂದ ಸ್ವೀಕರಿಸದೆ, ತನ್ನನ್ನು ಎತ್ತಿ ಆಡಿಸಿದ 'ಧನಿ' ಎಂಬ ಅಕ್ಕಸಾಲಿಗ ಹೆಣ್ಣುಮಗಳಿಂದ ಸ್ವೀಕರಿಸಿದ್ದು. ಅವರಿಗೆ ಚಿಕ್ಕ ವಯಸ್ಸಿನಿಂದಲೇ ಜಾತಿಯ ಬಗ್ಗೆ ನಂಬಿಕೆ ಇರಲಿಲ್ಲ. ಮಾನವಜಾತಿಯನ್ನು ಒಂದಾಗಿಸಬಲ್ಲ ಸರ್ವಧರ್ಮ ಸಮನ್ವಯವನ್ನು ಮುಂದೆ ಅವರು ಪ್ರತಿಪಾದಿಸಿದರು.

ಒಮ್ಮೆ ರಾಮಕೃಷ್ಣರು ಭಂಗಿಯೊಬ್ಬನ ಮನೆಗೆ ಹೋಗಿ "ನೀನು ದೇವಸ್ಥಾನವನ್ನು ಸ್ವಚ್ಛ ಮಾಡಿ ಎಲ್ಲರ ಸೇವೆ ಮಾಡುತ್ತಿರುವೆ. ನಿನ್ನ ಮನೆಯನ್ನು ಸ್ವಚ್ಛ ಮಾಡಿ ನಾನು ಪಾವನನಾಗುವೆ" ಎಂದು ಕೇಳಿಕೊಂಡರು. ಆದರೆ ಭಂಗಿಯು ಅವರಿಂದ ಮನೆಯನ್ನು ಸ್ವಚ್ಛ ಮಾಡಿಸಿದರೆ ತನಗೆ ಪಾಪ ಬರುವುದೆಂದು ನಿರಾಕರಿಸಿದ. ಆದರೆ ರಾತ್ರಿಯ ಹೊತ್ತಿನಲ್ಲಿ ಆ ಭಂಗಿಯ ಮನೆಗೆ ಬಂದು ಮನೆಯವರೆಲ್ಲ ನಿದ್ರೆ ಮಾಡುತ್ತಿರುವಾಗ ಅವರ ಬಚ್ಚಲನ್ನು ಸ್ವಚ್ಛ ಮಾಡಿದರು!

ರಾಮಕೃಷ್ಣರು ಜಾತಿಯನ್ನು ನೋಡದೆ ಕೇವಲ ಅಂತಃ ಶುದ್ಧಿಯನ್ನು, ವ್ಯಾಕುಲತೆಯನ್ನು ಗಮನಿಸಿ ಶಿಷ್ಯರನ್ನು ಸ್ವೀಕರಿಸುತ್ತಿದ್ದರು. ಎಲ್ಲ ಜಾತಿಯವರ ಮನೆಯಲ್ಲಿಯೂ ಅವರು ಊಟ ಮಾಡುತ್ತಿದ್ದರು. ಕೆಳಜಾತಿಯವನಾದ ಅಧರಸೇನನ ಮನೆಯಲ್ಲಿ ಊಟ ಮಾಡಿದ್ದಾರೆ. ಅವರ ಪ್ರಕಾರ ದೈವಭಕ್ತಿಯಿಂದ ಅಸ್ಪೃಶ್ಯನು ಬ್ರಾಹ್ಮಣನಾಗುತ್ತಾನೆ. ಜಾತಿಯನ್ನು ಹುಟ್ಟು ನಿರ್ಣಯಿಸುವುದಿಲ್ಲ ಎಂಬುದು ಇದರಿಂದ ತಿಳಿದುಬರುತ್ತದೆ.

"ನೀವು ನಿಮ್ಮ ಸಹೋದರರನ್ನು ಪ್ರೀತಿಸುವಿರೇನು? ದೇವರನ್ನು ಅರಸಿಕೊಂಡು ನೀವೆಲ್ಲಿಗೆ ಹೋಗುವಿರಿ? ಕಣ್ಣೆದುರಿಗೆ ಇರುವ ದೀನರು, ದರಿದ್ರರು, ದುಃಖಿಗಳು ದೇವರಲ್ಲವೇ? ಮೊದಲು ಅವರನ್ನು ಏತಕ್ಕೆ ಪೂಜಿಸಬಾರದು? 'ದರಿದ್ರ ದೇವೋ ಭವ'" ಈ ರೀತಿ ಹೇಳಿದವರು ಸ್ವಾಮಿ ವಿವೇಕಾನಂದರು. ಒಂದು ಘಟನೆ ದೀನದಲಿತರ ಬಗ್ಗೆ ಅವರಿಗಿದ್ದ ಪ್ರೇಮ, ಅನುಕಂಪವನ್ನು ತೋರಿಸುತ್ತದೆ.

ವಿವೇಕಾನಂದರು ಒಂದು ಸಲ ರಾಜಸ್ಥಾನದ ರೈಲ್ವೆ ನಿಲ್ದಾಣದಲ್ಲಿ ತಂಗಿದ್ದರು. ಅವರನ್ನು ಕಾಣಲು ಜನರ ಮಹಾಪೂರವೇ ಬರುತ್ತಿತ್ತು. ಎಲ್ಲರಿಗೂ ಸಮಾಧಾನದಿಂದ ಯೋಗ್ಯ ಉತ್ತರಗಳನ್ನು ಕೊಡುತ್ತಿದ್ದರು. ಹೀಗೆ ಮೂರು ದಿನಗಳೇ ಕಳೆದವು. ಅನ್ನಾಹಾರ ಸ್ವೀಕರಿಸಲು ಸಮಯವೂ ಇಲ್ಲ. ಯಾರೂ ಅದರ ಬಗ್ಗೆ ಪ್ರಸ್ತಾಪಿಸಲೂ ಇಲ್ಲ. ಮೂರನೇ ರಾತ್ರಿಯಂದು ಒಬ್ಬ ಬಡವ ಸ್ವಾಮಿಜಿಯವರ ಬಳಿ ಬಂದು, ಸ್ವಾಮಿಜಿ, ತಾವು ಮೂರು ದಿನಗಳಿಂದ ಉಪವಾಸ ಇರುವುದರಿಂದ, ಗೋಧಿಹಿಟ್ಟು ಬೇಳೆ ತಂದುಕೊಡುವೆನು. ಅದನ್ನು ಬೇಯಿಸಿಕೊಂಡು ಊಟಮಾಡಿರಿ, ಎಂದು ವಿನಂತಿಸಿದನು. ತಾನು ಚಮ್ಮಾರ ಜಾತಿಯವನಾದ್ದರಿಂದ ತಮ್ಮ ಮನೆಯ ಆಹಾರವನ್ನು ವಿವೇಕಾನಂದರು ಸ್ವೀಕರಿಸಲಾರರು ಎಂಬ ಭಾವನೆಯಿಂದ ಆ ರೀತಿ ಹೇಳಿದನು. ಆದರೆ ವಿವೇಕಾನಂದರು ಆ ಬಡವನಲ್ಲಿ ದೇವರ ಸ್ವರೂಪವನ್ನು ಕಂಡರು ಮತ್ತು ಆತನು ರೊಟ್ಟಿಯನ್ನು ಸಿದ್ಧ ಮಾಡಿಕೊಂಡು ತಂದರೆ ಅದನ್ನೇ ತಿನ್ನುವುದಾಗಿ ಹೇಳಿದರು. ಕೀಳುವರ್ಗದ ಆತನು ಸಂನ್ಯಾಸಿಗೆ ಆಹಾರ ಬಡಿಸಿದನೆಂಬ ವಿಷಯ ತಿಳಿದರೆ ಮಹಾರಾಜರು ಶಿಕ್ಷಿಸುವರೆಂದು ಭಯಪಟ್ಟನಾದರೂ, ಸಂನ್ಯಾಸಿಯೊಬ್ಬರಿಗೆ ಆಹಾರ ಕೊಡುವ ಭಾಗ್ಯವನ್ನು ಕಳೆದುಕೊಳ್ಳಬಾರದೆಂದು ನಿರ್ಧರಿಸಿ ರೊಟ್ಟಿಯನ್ನು ತಂದುಕೊಟ್ಟನು. ಸ್ವಾಮೀಜಿ ಆನಂದದಿಂದ ರೊಟ್ಟಿಯನ್ನು ಸ್ವೀಕರಿಸಿ ಆ ಬಡವನನ್ನು ಬಿಗಿದಪ್ಪಿಕೊಂಡರು.

ಸ್ವಾಮಿಜಿ ಚಮ್ಮಾರನಿಂದ ರೊಟ್ಟಿಯನ್ನು ಸ್ವೀಕರಿಸಿದ ವಿಚಾರವನ್ನು ತಿಳಿದ ಮೇಲ್ವರ್ಗದವರು ಸ್ವಾಮಿಜಿಯ ಹತ್ತಿರ ಬಂದು ಅಸಮಾಧಾನ ವ್ಯಕ್ತಪಡಿಸಿದರು. ಅದಕ್ಕೆ ಸ್ವಾಮಿಜಿ ಬೇಸರದಿಂದ "ಮೂರು ದಿನಗಳ ಕಾಲ ನನ್ನ ಊಟ, ವಿಶ್ರಾಂತಿಗಳ ಬಗ್ಗೆ ಯಾರೊಬ್ಬರೂ ವಿಚಾರಿಸಲಿಲ್ಲ. ಆ ಬಡವ ಅನುಕಂಪದಿಂದ ತಂದುಕೊಟ್ಟ ರೊಟ್ಟಿಯ ಬಗ್ಗೆ ಪ್ರಶ್ನಿಸುತ್ತಿರುವಿರಿ. ಮತ್ತು ಅವನು ಹೀನ ಜಾತಿಯವನೆಂದು ಹೀಯಾಳಿಸುತ್ತಿರುವಿರಿ. ಇದು ನಾಚಿಕೆಗೇಡು. ಸರ್ವರ ಸೇವೆಯನ್ನೂ ಮಾಡುವ ಚಮ್ಮಾರರು ನಿಮಗೆ ಮುಟ್ಟಬಾರದವರು. ಪ್ರತಿದಿನ ಸಂತೃಪ್ತಿಯ ಊಟ ಮಾಡುವ ನಿಮಗೆ ಹಸಿವು, ನೋವುಗಳ ಸಂಕಟ ತಿಳಿಯಲು ಅಸಾಧ್ಯ. ಬಡವನಾದ ಚಮ್ಮಾರನಿಗೆ ಅದರ ಅರ್ಥವಾಯಿತು. ನಿಮ್ಮೊಡನೆ ಮಾತನಾಡುವುದಕ್ಕೇ ಅಸಹ್ಯವಾಗುವುದು. ದಯವಿಟ್ಟು ತಾವು ಹೋಗಬಹುದು" ಎಂದರು. ಕೆಲವು ದಿನಗಳ ನಂತರ ಮಹಾರಾಜರಿಗೆ ವಿಷಯ ತಿಳಿದು ಆ ಚಮ್ಮಾರನನ್ನು ಅರಮನೆಗೆ ಕರೆಸಿ ಅವನಿಗೆ ಜಮೀನನ್ನು ಜಹಗೀರಾಗಿ ಕೊಟ್ಟು ಗೌರವಿಸಿದರು.

"ದೇವರ ನಿಜವಾದ ಆರಾಧಕನು ಯಾರ ಕುಲಗೋತ್ರಗಳನ್ನೂ ನೋಡದೇ ಬಡವರ ಸೇವೆ ಮಾಡುತ್ತಾನೆ. ಯಾರು ದೀನದಲಿತರಿಗೆ ಕರುಣೆ ತೋರುವರೋ ಅವರನ್ನು ನಾನು ಮಹಾತ್ಮ ಎಂದು ಕರೆಯುತ್ತೇನೆ. ಇಲ್ಲವಾದರೆ ಅವರನ್ನು ದುರಾತ್ಮರೆನ್ನುತ್ತೇನೆ. ಜಾತಿ ಭೇದಗಳಿಂದ ದರಿದ್ರರನ್ನು ತುಳಿಯುವುದು ತಪ್ಪದೆ, ಭಾರತದ ಉದ್ಧಾರ ಸಾಧ್ಯವಿಲ್ಲ." ವಿವೇಕಾನಂದರ ಈ ಮಾತುಗಳು ಮನನೀಯವಾಗಿವೆ. ✪

(ವಿವಿಧ ಆಧಾರಗಳಿಂದ ಸಂಗ್ರಹ:
ಯು.ಎನ್. ಸಂಗನಾಳಮಠ, ಹೊನ್ನಾಳಿ)